# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

**OFFICE OF THE DEPUTY TAHASILDAR, THAMBRAHALLI-583224**

ಎ.ವಿಲೇ.ನಂ.ಕಂ.ಪಹಣಿ.ವಿವಾದ/31/2015-16 ದಿನಾಂಕ:05 .05.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

| ವಾದಿ (ಶ್ರೀ/ಶ್ರೀಮತಿ) | ಪ್ರತಿವಾದಿ (ಶ್ರೀ/ಶ್ರೀಮತಿ) |
|---|---|
| ಕೊತ್ತಂಬ್ರಿ ನಿಂಗಮ್ಮ ಗಂಡ ಲೇಟ್ ಕೊಟ್ರಪ್ಪ ವಾಸ ಹಗರಿ ಕ್ಯಾದಿಗಿಹಳ್ಳಿ ಗ್ರಾಮ ಹಗರಿಬೊಮ್ಮನಹಳ್ಳಿ ತಾಲೂಕು | ಕೆ.ಪ್ರಕಾಶ ತಂದೆ ಸಣ್ಣನಿಂಗಪ್ಪ ವಾಸ ಹಗರಿ ಕ್ಯಾದಿಗಿಹಳ್ಳಿ ಗ್ರಾಮ ಹಗರಿ ಬೊಮ್ಮನಹಳ್ಳಿ ತಾಲೂಕು |

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಹಿರೇಸೊಬಟಿ | 447 ಮತ್ತು 448/ಜಿ/2 | 1.73 ಮತ್ತು 0.74 ಎಕರೆ |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಹಿರೇಸೊಬಟಿ ಗ್ರಾಮದ ಸ.ನಂ.447 ಮತ್ತು 448/ಜಿ/2 ವಿಸ್ತೀರ್ಣ ಕ್ರಮವಾಗಿ 1.73 ಮತ್ತು 0.74 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕ್ರಯ ನೊಂದಣಿ ದಸ್ತಾವೇಜು ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್21/2015-16 ರಲ್ಲಿ ಪ್ರಸ್ತುತ ಹಕ್ಕುಬದಲಾವಣೆಗೆ ಸಂಬಂಧಿಸಿದಂತೆ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:17.12.2015 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ವ್ಯಾಜ್ಯದ ಜಮೀನುಗಳು ಮೂಲತಃ ಕಾಡಪ್ಪನವರ ದುರುಗಪ್ಪ ತಂದೆ ನಿಂಗಪ್ಪ ಕ್ಯಾದಿಗಿಹಳ್ಳಿ ಇವರ ಜಮೀನಾಗಿದ್ದು ಸದರಿಯವರಿಂದ ವಾದಿಗಳು ದಿನಾಂಕ:30.10.2015 ರಂದು ನೊಂದಣಿ ದಸ್ತಾವೇಜು ಸಂಖ್ಯೆ 2678/2015-16 ರ ಮೂಲಕ ಕ್ರಯಕ್ಕೆ ಪಡೆದಿದ್ದು ಸದರಿ ಕ್ರಯ ಪತ್ರದ ಪ್ರಕಾರ ಕ್ರಯದಾರರಾದ ವಾದಿಗಳ ಹೆಸರಿಗೆ ಖಾತೆ ಮಾಡಿಕೊಡುವಂತೆ ಕೋರಿರುತ್ತಾರೆ.

ಪ್ರತಿವಾದಿಗಳಿಂದ ದಿನಾಂಕ:16.11.2015 ರಂದು ಪ್ರಶ್ನಿತ ಹಕ್ಕುಬದಲಾವಣೆ ಆದೇಶಕ್ಕೆ ತಕರಾರು ಬಂದಿದ್ದು ಸದರಿಯವರ ಪ್ರಕಾರ ಪ್ರಸ್ತುತ ವ್ಯಾಜ್ಯದ ಜಮೀನುಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು ಸದರಿ ಜಮೀನುಗಳ ಮೇಲೆ ತಮ್ಮ ಹಕ್ಕು ಇರುವುದರಿಂದ ಪ್ರಸ್ತುತ ಹಕ್ಕುಬದಲಾವಣೆಯನ್ನು ರದ್ದುಗೊಳಿಸುವಂತೆ ಕೋರಿರುತ್ತಾರೆ.

ವಿಚಾರಣಾ ವೇಳೆ ವಾದಿ, ಪ್ರತಿವಾದಿಗಳು ಮಂಡಿಸಿದ ವಾದ ಮತ್ತು ಪ್ರತಿವಾದವನ್ನು ಆಲಿಸಲಾಗಿ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ವ್ಯಾಜ್ಯದ ಜಮೀನಿನ ಮೂಲ ಪಟ್ಟಾದಾರರಾದ ಕಾಡಪ್ಪನವರ ದುರುಗಪ್ಪ ತಂದೆ ನಿಂಗಪ್ಪ ಇವರು ವಾದಿಗಳಿಗೆ ನೊಂದಣಿ ದಸ್ತಾವೇಜು ಸಂಖ್ಯೆ 2678/2015-16 ದಿನಾಂಕ:30.10.2015 ರ ಮೂಲಕ ವ್ಯಾಜ್ಯದ ಜಮೀನನ್ನು ವಾದಿಗಳಿಗೆ ಕ್ರಯಕ್ಕೆ ನಿಡಿರುತ್ತಾರೆ ಹಾಗೂ ಡಯಾಗ್ಲಾಟ್ ಪ್ರತಿಯನ್ನು ಪರಿಶೀಲಿಸಲಾಗಿ ಪ್ರಸ್ತುತ ವಾಜ್ಯದ ಜಮೀನು ಪಟ್ಟಾ ಜಮೀನಾಗಿರುವುದು ಕಂಡುಬಂದಿರುವುದಸರಿಂದ ಪ್ರಸ್ತುತ ನೊಂದಣಿ ಕ್ರಯ ದಸ್ತಾವೇಜು ಮೇರೆಗೆ ಕ್ರಯದಾರರಾದ ವಾದಿಗಳ ಹೆಸರಿಗೆ ಖಾತೆ ಮಾಡುತ್ತಾ ಪ್ರತಿವಾದಿಗಳು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಕಂಡುಕೊಳ್ಳುವಂತೆ ಸೂಚಿಸಿ ಆದೇಶ ಮಾಡುವುದು ಸೂಕ್ತವೆಂದು ಕಂಡುಬಂದಿರುವುದರಿಂದ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಹಿರೇಸೊಬಟಿ ಗ್ರಾಮದ ಸ.ನಂ.447 ಮತ್ತು 448/ಜಿ/2 ವಿಸ್ತೀರ್ಣ ಕ್ರಮವಾಗಿ 1.73 ಮತ್ತು 0.74 ಎಕರೆ ಜಮೀನುಗಳನ್ನು ಕ್ರಯ ನೊಂದಣಿ ದಸ್ತಾವೇಜು ಸಂಖ್ಯೆ: 2678/2015-16 ದಿನಾಂಕ:30.10.2015 ರ ಮೇರೆಗೆ ಕ್ರಯದಾರರಾದ ಕೊತ್ತಂಬ್ರಿ ನಿಂಗಮ್ಮ ಗಂಡ ಲೇಟ್ ಕೊಟ್ರಪ್ಪ ಹಗರಿ ಕ್ಯಾದಿಗಿಹಳ್ಳಿ ಗ್ರಾಮ ಇವರ ಹೆಸರಿಗೆ ಖಾತೆ ಮಾಡಲು ಹಾಗೂ ಪ್ರತಿವಾದಿಗಳು ಸಿವಿಲ್ ನ್ಯಾಯಾಲಯದಲ್ಲಿ ತಮ್ಮ ಹಕ್ಕನ್ನು ಸಾಬೀತುಪಡಿಸಿಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ:05.05.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

05/05

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ತಂಬ್ರಹಳ್ಳಿ.

ಉಪ ತಹಶೀಲ್ದಾರರು, ನಾಡ ಕಛೇರಿ ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ಭೂಮಿ ಕೇಂದ್ರ, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

06/05/16